# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1564** |
| **ಸದಸ್ಯರ ಹೆಸರು** | : | **ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **11-03-2022** |
| **ಉತ್ತರಿಸುವ ಸಚಿವರು** | : | **ಕಂದಾಯ ಸಚಿವರು** |

**ಪ್ರಶ್ನೆ** / **ಉತ್ತರ**

**ಪ್ರಶ್ನೆ (ಅ)** ಬರಗಾಲ, ಮಳೆಹಾನಿ, ಪ್ರಾಣಿ ಹಾವಳಿ ಮತ್ತು ಪ್ರಕೃತಿ ವಿಕೋಪದಿಂದ ರೈತರು ಬೆಳೆದ ಬೆಳೆಗಳು ಹಾಳಾದಲ್ಲಿ ಸರ್ಕಾರದಿಂದ ರೈತರಿಗೆ ದೊರೆಯುತ್ತಿರುವ ಪರಿಹಾರಗಳೇನು; (ವಿವರ ನೀಡುವುದು)

**ಉತ್ತರ:** ಪ್ರಸಕ್ತ ಸಾಲಿನ ಪ್ರವಾಹದಿಂದ ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗಿದ್ದು, ತೀವ್ರ ಸಂಕಷ್ಟದಲ್ಲಿರುವ ರೈತರಿಗೆ ಹೆಚ್ಚಿನ ಆರ್ಥಿಕ ನೆರವು ನೀಡುವ ಸಲುವಾಗಿ ಮಾನ್ಯ ಮುಖ್ಯಮಂತ್ರಿಗಳು ಡಿಸೆಂಬರ್ ಮಾಹೆಯಲ್ಲಿ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ನೀಡಿರುವ ಹೇಳಿಕೆಯನುಸಾರ ಪ್ರವಾಹದಿಂದ ಬೆಳೆ ಹಾನಿಯಾದ ರೈತರಿಗೆ ಇನ್‌ಪುಟ್ ಸಬ್ಸಿಡಿ ಪಾವತಿಸಲು ಮಾರ್ಗಸೂಚಿಯಲ್ಲಿ ಪ್ರತಿ ಹೆಕ್ಟೇರ್‌ಗೆ ನಿಗಧಿ ಪಡಿಸಿದ ದರವನ್ನು ಈ ಕೆಳಕಂಡಂತೆ ಹೆಚ್ಚಿಸಿದೆ:

| ಬೆಳೆ ವಿಧ | ಮಾರ್ಗಸೂಚಿ ದರ | ರಾಜ್ಯ ಸರ್ಕಾರದ ಹೆಚ್ಚುವರಿ ಮೊತ್ತ | ಒಟ್ಟು |
|---|---:|---:|---:|
| ಮಳೆಯಾಶ್ರಿತ | 6,800/– | 6,800/– | 13,600/– |
| ನೀರಾವರಿ | 13,500/– | 11,500/– | 25,000/– |
| ಬಹುವಾರ್ಷಿಕ | 18,000/– | 10,000/– | 28,000/– |

**ಪ್ರಶ್ನೆ (ಆ)** ಕಳೆದ 3 ವರ್ಷಗಳಲ್ಲಿ ಈ ರೀತಿಯ ಬೆಳೆ ನಷ್ಟದಿಂದ ರಾಜ್ಯದಲ್ಲಿ ತೊಂದರೆಗೊಳಗಾಗಿರುವ ರೈತರ ಸಂಖ್ಯೆ ಎಷ್ಟು; ಮತ್ತು ನಷ್ಟದ ಪ್ರಮಾಣವೆಷ್ಟು ಹಾಗೂ ಇವರಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಪರಿಹಾರವೆಷ್ಟು; (ತಾಲ್ಲೂಕುವಾರು ಮತ್ತು ಫಲಾನುಭವಿವಾರು ಮಾಹಿತಿ ನೀಡುವುದು)

**ಉತ್ತರ:** 2021ನೇ ಸಾಲಿನ ಪ್ರವಾಹದಿಂದ ಬೆಳೆ ಹಾನಿಯಾದ 18.49 ಲಕ್ಷ ರೈತರಿಗೆ ರೂ.2435.57 ಕೋಟಿ ಇನ್ಪುಟ್ ಸಬ್ಸಿಡಿಯನ್ನು, 2020ನೇ ಸಾಲಿನ ಪ್ರವಾಹದಿಂದ ಬೆಳೆ ಹಾನಿಯಾದ 12.00ಲಕ್ಷ ರೈತರಿಗೆ ರೂ.941.71 ಕೋಟಿ ಹಾಗೂ 2019ನೇ ಸಾಲಿನ ಪ್ರವಾಹದಿಂದ ಬೆಳೆ ಹಾನಿಯಾದ 6.71ಲಕ್ಷ ರೈತರಿಗೆ ರೂ.1232.20ಕೋಟಿ ಇನ್‌ಪುಟ್ ಸಬ್ಸಿಡಿಯನ್ನು ಪರಿಹಾರ ತಂತ್ರಾಂಶದ ಮೂಲಕ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗಿದೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ.

ತಾಲ್ಲೂಕುವಾರು ಮತ್ತು ಫಲಾನುಭವಿವಾರು ಮಾಹಿತಿಯು https://landrecords.karnataka.gov.in/PariharaPayment/ ಜಾಲತಾಣದಲ್ಲಿ ಲಭ್ಯವಿದೆ.

**ಪ್ರಶ್ನೆ (ಇ)** ಕಳೆದ 3 ವರ್ಷಗಳಲ್ಲಿ ರಾಜ್ಯದ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಸುರಕ್ಷಾ ಫಸಲ್ ಭೀಮಾ ಯೋಜನೆಯಡಿ ವಿಮೆ ಮಾಡಿಸಲು ಅರ್ಜಿ ಸಲ್ಲಿಸಿರುವ ರೈತರೆಷ್ಟು; ಅರ್ಜಿ ಸಲ್ಲಿಸಿ ವಿಮೆ ಪಡೆದ ರೈತರೆಷ್ಟು; (ಪಡೆದಿರುವ ವಿಮೆ ಮೊತ್ತದ ವಿವರಗಳನ್ನು ತಾಲ್ಲೂಕುವಾರು ಮತ್ತು ಫಲಾನುಭವಿವಾರು ನೀಡುವುದು)

**ಉತ್ತರ:** 2018-19ನೇ ಸಾಲಿನಿಂದ 2020-21ನೇ ಸಾಲಿನಲ್ಲಿ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ವಿಮೆ ಮಾಡಿಸಿದ ರೈತರಿಗೆ ವಿವರ, ಬೆಳೆ ವಿಮೆ ಪರಿಹಾರ ಪಡೆದ ಫಲಾನುಭವಿಗಳ ಹಾಗೂ ಮೊತ್ತದ ವಿವರ ಈ ಕೆಳಕಂಡಂತಿದೆ:

(ಆರ್ಥಿಕ ರೂ. ಲಕ್ಷಗಳಲ್ಲಿ)

| ವರ್ಷ | ನೋಂದಾಯಿಸಿದ ರೈತರ ಸಂಖ್ಯೆ | ಒಟ್ಟು ಇತ್ಯರ್ಥಪಡಿಸಿರುವ ಪರಿಹಾರ | |
|---|---:|---:|---:|
| | | ಫಲಾನುಭವಿಗಳ ಸಂಖ್ಯೆ | ಮೊತ್ತ |
| 2018-19 | 1784950 | 1278417 | 259440.39 |
| 2019-20 | 2101929 | 733998 | 84524.92 |
| 2020-21 | 1488444 | 481367 | 60847.61 |

**(ಈ)** ಪ್ರಧಾನ ಮಂತ್ರಿ ಸುರಕ್ಷಾ ಫಸಲ್ ಭೀಮಾ ಯೋಜನೆಯಡಿ ಅರ್ಜಿ ಸಲ್ಲಿಸಿಯೂ ವಿಮೆ ಪಡೆಯದ ರೈತರೆಷ್ಟು; ವಿಮೆ ಮೊತ್ತ ಬಾರದಿರುವುದಕ್ಕೆ ಕಾರಣಗಳೇನು? (ಸಂಪೂರ್ಣ ವಿವರ ನೀಡುವುದು)

2018-19ನೇ ಸಾಲಿನಿಂದ 2020-21ರವರೆಗೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ಅರ್ಜಿ ಸಲ್ಲಿಸಿಯೂ ವಿಮೆ ಪಡೆಯದ ರೈತರ ಸಂಖ್ಯೆ ಈ ಕೆಳಕಂಡಂತಿದೆ:

| **ವರ್ಷ** | **ವಿಮೆ ಪಡೆಯದ ರೈತರ ಸಂಖ್ಯೆ** |
|---|---|
| 2018-19 | 10905 |
| 2019-20 | 25097 |
| 2020-21 | 12575 |

2016-17 ರಿಂದ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯನ್ನು ವೈಜ್ಞಾನಿಕವಾಗಿ ಸಂರಕ್ಷಣೆ ಪೋರ್ಟಲ್ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಕರ್ನಾಟಕ ರೈತರ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯು ಕ್ಷೇತ್ರಾಧಾರಿತ ಹಾಗೂ ಇಳುವರಿ ಆಧಾರಿತ ಯೋಜನೆಯಾಗಿದ್ದು, ಮಾರ್ಗಸೂಚಿಯನುಸಾರ ಹೋಬಳಿ/ಗ್ರಾಮಾಪಂಚಾಯತಿ ಮಟ್ಟದಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯವರು ನೀಡುವ ಬೆಳೆ ಕಟಾವು ಪ್ರಯೋಗಗಳಿಂದ ಬಂದಂತಹ ವಾಸ್ತವಿಕ ಇಳುವರಿಯು (Actual Yield) ನಿಗದಿಪಡಿಸಲಾದ ಪ್ರಾರಂಭಿಕ ಇಳುವರಿಗಿಂತ (Threshold Yield) ಕಡಿಮೆ ಇದ್ದರೆ, ಇಳುವರಿಯ ಶೇಕಡವಾರು ಕೊರತೆಗನುಗುಣವಾಗಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಲೆಕ್ಕ ಹಾಕಲಾಗುತ್ತದೆ.

ಮುಂಗಾರು 2018ರ ಹಂಗಾಮಿನಿಂದ ಬೆಳೆ ಕಟಾವು ಆಧಾರದ ಮೇಲೆ ಬೆಳೆ ವಿಮೆ ಪರಿಹಾರ ಲೆಕ್ಕ ಹಾಕಲು ಸಂರಕ್ಷಣೆ ತಂತ್ರಾಂಶದಲ್ಲಿ ಕೇಂದ್ರ ಸರ್ಕಾರದಿಂದ ಅನುಮೋದಿಸಿದ ವಿನಾಯಿತಿಗಳನ್ನು ಅಳವಡಿಸಿಕೊಂಡು ಬೆಳೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ಬೆಳೆ ಸಮೀಕ್ಷೆಯ ದತ್ತಾಂಶವನ್ನು ತಾಳೆ ಮಾಡಿ, ತಾಳೆಯಾಗಿರುವ ಪ್ರಸ್ತಾವನೆಗಳಿಗೆ ಮಾತ್ರ ಬೆಳೆ ವಿಮೆ ಪರಿಹಾರ ಮೊತ್ತ ಲೆಕ್ಕಾಚಾರ ಮಾಡಲಾಗುತ್ತದೆ.

ಈ ಎರಡು ಪ್ರಕ್ರಿಯೆಯಿಂದಾಗಿ ವಿಮಾ ಪರಿಹಾರ ಮೊತ್ತ ಇತ್ಯರ್ಥವಾಗಿರಲು ವಿಳಂಬವಾಗಿರುತ್ತದೆ. ಉಳಿದಂತೆ, ರೈತ ಫಲಾನುಭವಿಗಳ ಆಧಾರ್ ಸಂಖ್ಯೆ ಬ್ಯಾಂಕ್ ಖಾತೆಗೆ ಲಿಂಕ್ ಆಗದೆ ಇರುವ ಕಾರಣ/ Account reached maximum Credit limit set on account/ A/c Blocked or Frozen/ Inactive Aadhaar/NPCI failed ಕಾರಣಗಳಿಂದ ಬಾಕಿ ಇರುವ ವಿಮಾ ಪರಿಹಾರ ಮೊತ್ತವನ್ನು ಅನುಷ್ಠಾನ ವಿಮಾ ಸಂಸ್ಥೆಯವರಿಂದ ಇತ್ಯರ್ಥಪಡಿಸುವ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ.

*(ಕೃಷಿ ಇಲಾಖೆಯಿಂದ ವರ್ಗಾವಣೆಗೊಂಡಿದೆ)*

ಕಂಇ 117 ಟಿಎನ್‌ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1564ಕ್ಕೆ

ಅನುಬಂಧ

**2019 Input Subsidy payment details**

| Sl.No. | District | Area Affected (in Ha) | No of Beneficaries | Amount Paid in crores |
|---|---|---|---|---|
| 1 | Belagavi | 283938 | 164033 | 264.88 |
| 2 | Dharwad | 170650 | 128969 | 279.33 |
| 3 | Haveri | 179513 | 114634 | 210.22 |
| 4 | Bagalkot | 75816 | 42209 | 94.87 |
| 5 | Kodagu | 77789 | 39109 | 103.14 |
| 6 | Shivamogga | 32338 | 37373 | 41.25 |
| 7 | Chikkamgaluru | 34061 | 31672 | 66.89 |
| 8 | Hassan | 25460 | 25923 | 41.55 |
| 9 | Ballari | 2498 | 20721 | 29.83 |
| 10 | Uttara Kananda | 13693 | 17875 | 15.43 |
| 11 | Davanagere | 590 | 8487 | 10.20 |
| 12 | Vijayapura | 16319 | 8133 | 18.25 |
| 13 | Mysuru | 4593 | 5870 | 6.68 |
| 14 | Raichur | 15723 | 5517 | 13.87 |
| 15 | Yadgir | 12832 | 5461 | 14.79 |
| 16 | Gadag | 14984 | 5180 | 13.07 |
| 17 | Kalaburagi | 7006 | 4481 | 7.39 |
| 18 | Dakshina Kananda | 1573 | 2231 | 2.62 |
| 19 | Tumakuru | 2164 | 1658 | 1.55 |
| 20 | Mandya | 214 | 725 | 0.61 |
| 21 | Udupi | 322 | 477 | 0.24 |
| 22 | Chamarajanagara | 277 | 399 | 0.51 |
| 23 | Koppal | 164 | 177 | 0.19 |
| | **Total** | **972517.73** | **671314** | **1232.20** |

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1564ಕ್ಕೆ

ಅನುಬಂಧ

| 2020 Input Subsidy payment details | | | | |
|---|---|---|---|---|
| Sl.No. | District | Area Affected (in Ha) | No of Beneficaries | Amount Paid in crores |
| 1 | Kalburgi | 466074 | 210850 | 150.41 |
| 2 | Vijayapura | 236426 | 186702 | 129.87 |
| 3 | Bidar | 270349 | 135458 | 84.86 |
| 4 | Gadag | 203525 | 112377 | 118.25 |
| 5 | Dharwad | 206664 | 112411 | 100.44 |
| 6 | Belagavi | 169173 | 103935 | 79.78 |
| 7 | Bagalkote | 112475 | 67662 | 60.59 |
| 8 | Yadagiri | 71977 | 60090 | 39.09 |
| 9 | Raichur | 43218 | 36463 | 24.11 |
| 10 | Kodagu | 40722 | 34815 | 47.99 |
| 11 | Chitradurga | 56988 | 49444 | 34.81 |
| 12 | Chikamgaluru | 12214 | 19045 | 29.05 |
| 13 | Hassan | 17910 | 18121 | 14.15 |
| 14 | Haveri | 32912 | 19928 | 10.71 |
| 15 | Bellar | 10395 | 11657 | 7.94 |
| 16 | Koppal | 7927 | 7917 | 4.44 |
| 17 | Uttara Kannada | 1067 | 3535 | 1.11 |
| 18 | Davanagere | 2153 | 3328 | 1.68 |
| 19 | Shivamogga | 3904 | 3028 | 1.11 |
| 20 | Mysuru | 1279 | 2321 | 0.83 |
| 21 | Dakshina Kannada | 510 | 940 | 0.40 |
| 22 | Udupi | 385 | 319 | 0.09 |
| | **Total** | **1968247** | **1200346** | **941.71** |

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1564 ಕ್ಕೆ

ಅನುಬಂಧ

**2021 Input Subsidy payment details**

| Sl.No. | District | Affected Area paid (in Ha) | No of Beneficaries | Amount Paid in crores |
|---|---|---|---|---|
| 1 | Bagalkote | 55084 | 63327 | 101.32 |
| 2 | Belagavi | 97459 | 118348 | 192.10 |
| 3 | Bellary | 42008 | 52553 | 99.64 |
| 4 | Bengaluru Rural | 14645 | 23668 | 21.39 |
| 5 | Bengaluru Urban | 3799 | 5989 | 5.57 |
| 6 | Bidar | 139020 | 159167 | 194.95 |
| 7 | Chamarajanagar | 2488 | 4895 | 3.81 |
| 8 | Chikabalapura | 60331 | 82294 | 90.31 |
| 9 | Chikamagalur | 46919 | 58432 | 110.33 |
| 10 | Chitradurga | 97404 | 100134 | 145.75 |
| 11 | Dakshina Kannada | 374 | 948 | 0.95 |
| 12 | Davanagere | 14314 | 26956 | 26.60 |
| 13 | Dharwad | 140909 | 111014 | 193.14 |
| 14 | Gadag | 54729 | 68300 | 84.69 |
| 15 | Hassan | 86754 | 144653 | 141.96 |
| 16 | Haveri | 39613 | 66730 | 57.86 |
| 17 | Kalaburgi | 230804 | 217154 | 327.44 |
| 18 | Kodagu | 39254 | 44232 | 105.67 |
| 19 | Kolar | 50021 | 78872 | 77.65 |
| 20 | Koppal | 43192 | 61323 | 79.10 |
| 21 | Mandya | 2905 | 6786 | 4.39 |
| 22 | Mysuru | 3392 | 7689 | 5.42 |
| 23 | Raichur | 56559 | 82066 | 116.50 |
| 24 | Ramanagara | 41476 | 66845 | 57.23 |
| 25 | Shivamogga | 6173 | 12790 | 11.19 |
| 26 | Tumkur | 95231 | 145492 | 131.84 |
| 27 | Udupi | 107 | 303 | 0.15 |
| 28 | Uttara Kannada | 3632 | 8636 | 5.38 |
| 29 | Vijayanagara | 8168 | 15070 | 17.34 |
| 30 | Vijayapura | **1686** | 2759 | 3.68 |
| 31 | Yadagiri | 10076 | 11861 | 22.23 |
| | **Total** | **1488524** | **1849286** | **2435.57** |